# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1600 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಈವರೆಗೂ ರೈತರಿಗೆ ಮಂಜೂರಾಗಿರುವ ಜಮೀನುಗಳನ್ನು ಪೋಡಿ ಮಾಡಿ ದುರಸ್ತಿಪಡಿಸಲು ಬಾಕಿ ಯಿರುವ ಪ್ರಕರಣಗಳೆಷ್ಟು; | ಕೋಲಾರ ಜಿಲ್ಲೆ ವ್ಯಾಪ್ತಿಯಲ್ಲಿ ಸರ್ಕಾರದಿಂದ ರೈತರಿಗೆ ಮಂಜೂರಾಗಿರುವ ಜಮೀನುಗಳ ಮಂಜೂರಿಯಂತೆ ಪೋಡಿ ಮಾಡಲು ಒಟ್ಟು 7,542 ಬ್ಲಾಕ್‌ಗಳ ಅನುಬಂಧ-1 ಸ್ವೀಕೃತಿಯಾಗಿರುತ್ತವೆ. ಈ ಪೈಕಿ 4,940 ಬ್ಲಾಕ್‌ಗಳ ಅಳತೆ ಮತ್ತು 2,334 ಬ್ಲಾಕ್‌ಗಳ ದುರಸ್ತಿ ಕಾರ್ಯ ಪೂರ್ಣ ಗೊಂಡಿದ್ದು, ಭೂಮಾಪನ ಇಲಾಖೆಯಲ್ಲಿ ಅಳತೆ ಮತ್ತು ಇತರೆ ವಿವಿಧ ಹಂತಗಳಲ್ಲಿ 5208 ಬ್ಲಾಕ್‌ಗಳು ಬಾಕಿ ಇರುತ್ತವೆ. |
| ಆ) | ಈ ರೀತಿ ಬಾಕಿಯಿರುವ ಪ್ರಕರಣಗಳ ಪೈಕಿ ರೈತರ ಬಳಿ ದೃಢೀಕೃತ ಮೂಲ ಮಂಜೂರಾತಿ ದಾಖಲೆಗಳಿದ್ದು, ಇದರ ಮೂಲ ಮಂಜೂರಾತಿ ಕಡತಗಳು ತಾಲ್ಲೂಕು ಕಛೇರಿಗಳಲ್ಲಿ ಲಭ್ಯವಿಲ್ಲದೇ ರೈತರು ತಮ್ಮ ಜಮೀನುಗಳನ್ನು ಪೋಡಿ ಮಾಡಿಸಲಾಗದೇ ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪ್ರಕರಣಗಳ ವಿವರಗಳನ್ನು ಒದಗಿಸುವುದು); | ಬಂದಿದೆ.<br><br>ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25-11-2024 ರಲ್ಲಿ ಸರ್ಕಾರಿ ಜಮೀನು ಪೋಡಿ ಮಾಡುವ ಸಲುವಾಗಿ ನಮೂನೆ 01 ರಿಂದ 05 ಮತ್ತು 06 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿದೆ. |
| ಇ) | ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಿ, ರೈತರ ಹಿತರಕ್ಷಣೆಗೆ ಸರ್ಕಾರವು ಈವರೆಗೆ ತೆಗೆದುಕೊಂಡ ಕ್ರಮಗಳೇನು; | ಭೂಮಂಜೂರಿ ಜಮೀನುಗಳ ಕುರಿತು ರೈತರ ಬಳಿ ದೃಢೀಕೃತ ಮೂಲ ಮಂಜೂರಾತಿ ದಾಖಲೆಗಳಿದ್ದು, ಅವುಗಳ ಮೂಲ ಮಂಜೂರಾತಿ ಕಡತಗಳು ತಾಲ್ಲೂಕು ಕಛೇರಿಗಳಲ್ಲಿ ಲಭ್ಯವಿಲ್ಲದ ಕಡತಗಳು ಮತ್ತು ಯಾವುದೇ ಮಂಜೂರಿ ಜಮೀನಿನ ದರಖಾಸ್ತು ಪೋಡಿ ಕುರಿತು ಕಡತದಲ್ಲಿ ಕನಿಷ್ಠ ಮೂಲ ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿ ಪೋಡಿ ದುರಸ್ತಿ ಪಡಿಸುವ ಕುರಿತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗೈರು ವಿಲೇ ಕಡತ ಪುನರ್ ನಿರ್ಮಾಣ ಸಮಿತಿ ರಚಿಸಲು ಆದೇಶಿಸಿ, ಗೈರು ವಿಲೇ ಕಡತ ತಯಾರಿಸುವ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಲಾಗಿದೆ. |
| ಈ) | ಇಂತಹ ಪ್ರಕರಣಗಳನ್ನು ಗೈರು ಕಡತಗಳ ವಿಲೇವಾರಿ ಸಮಿತಿಗೆ ಶಿಫ್ಹಾರಸ್ಸು ಮಾಡಿ, ಇತ್ಯರ್ಥಪಡಿಸದೆ ಬಾಕಿಯಿರುವ ಪ್ರಕರಣ ಗಳೆಷ್ಟು; (ವಿವರಗಳನ್ನು ಒದಗಿಸುವುದು) | ಗೈರು ಕಡತಗಳ ವಿಲೇವಾರಿ ಸಮಿತಿಗೆ ಶಿಫಾರಸ್ಸು ಆಗಿ ಬಂದಿರುವ 23 ಪ್ರಕರಣಗಳು ಇತ್ಯರ್ಥಪಡಿಸಲು ಬಾಕಿ ಇರುತ್ತವೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |

| | | |
|---|---|---|
| ಊ) | ಈ ರೀತಿ ಗೈರು ಕಡತಗಳ ವಿಲೇವಾರಿ ಸಮಿತಿಯಲ್ಲಿ ಇತ್ಯರ್ಥವಾಗದೇ, ವಿನಾ ಕಾರಣ ರೈತರನ್ನು ಅಲೆದಾಡಿಸುತ್ತಿರುವ ಬಗ್ಗೆ ಸರ್ಕಾರದ ನಿಲುವೇನು; ಯಾವ ಕಾಲಮಿತಿಯೊಳಗೆ ಇಂತಹ ಪ್ರಕರಣ ಗಳನ್ನು ಇತ್ಯರ್ಥಪಡಿಸಲಾಗುವುದು? | ಗೈರು ವಿಲೇ ಕಡತ ಪುನರ್ ನಿರ್ಮಾಣ ಮಾಡುವ ಸಲುವಾಗಿ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ರವರು ಪ್ರತಿ ಮಾಹೆಯ 1ನೇ, 3ನೇ ಶನಿವಾರಗಳಂದು ಗೈರು ವಿಲೇ ಕಡತಗಳ ಸಭೆ ನಡೆಸಿ ಸರ್ಕಾರದ ಸುತ್ತೋಲೆ/ ಸೂಚನೆಗಳಂತೆ ಅರ್ಹ ಕಡತಗಳಲ್ಲಿ ದಾಖಲೆ ಪುನರ್ ನಿರ್ಮಾಣ ಮಾಡಿ ಪೋಡಿ ದುರಸ್ತಿ ಕ್ರಮ ಕೈಗೊಳ್ಳಲು ಆದೇಶ ನೀಡುತ್ತಿದ್ದು, ಅಂತಹ ಕಡತಗಳನ್ನು ಲಭ್ಯ ದಾಖಲೆಗಳ ಆಧಾರದ ಮೇಲೆ ತ್ವರಿತವಾಗಿ ಇತ್ಯರ್ಥಪಡಿಸುತ್ತಿದ್ದಾರೆ. |

ಸಂಖ್ಯೆ: ಕಂಇ **68** ಎಸ್ ಎಸ್ ಸಿ **2026**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

## ANNEXURE-2

ಕೋಲಾರ ಜಿಲ್ಲೆಯಲ್ಲಿ ಗೈರು ವಿಲೇ ಸಮಿತಿಗೆ ಶಿಫಾರಸ್ಸಾಗಿ ಇತ್ಯರ್ಥಪಡಿಸಲು ಬಾಕಿ ಇರುವ ಕಡತಗಳು

| ಕ್ರ ಸಂ | ತಾಲ್ಲೂಕು | ಗ್ರಾಮದ ಹೆಸರು | ಸ.ನಂ. | ಮಂಜೂರಿದಾರರ ಹೆಸರು |
|---|---|---|---|---|
| 1 | ಕೋಲಾರ | ಮಲ್ಲಸಂದ್ರ | 1 | ಮುನಿಶಾಮಿ ಬಿನ್ ಚೆನ್ನಪ್ಪ |
| 2 | ಕೋಲಾರ | ಕೋಲುತಮ್ಮನಹಳ್ಳಿ | 37 | ಟಿ ಮುನಿಯಪ್ಪ |
| 3 | ಮಾಲೂರು | ಸಂಪಂಗೆರೆ | 94 | ಅಮೂಸಾಬಿ |
| 4 | ಮಾಲೂರು | ಸಂಪಂಗೆರೆ | 94 | ಎ ಕೆ ತಿಮ್ಮಯ್ಯ |
| 5 | ಮಾಲೂರು | ಸಂಪಂಗೆರೆ | 94 | ಬುಡ್ಡಗಾ ಪು ಬಿಡ್ಡಪ್ಪ |
| 6 | ಮಾಲೂರು | ಸಂಪಂಗೆರೆ | 94 | ಆ ಕ ವೆಂಕಟೆಗಾ |
| 7 | ಮಾಲೂರು | ಸಂಪಂಗೆರೆ | 99 | ದೇಕನ ಮುನಿಯಪ್ಪ |
| 8 | ಮಾಲೂರು | ಮಾಲೂರು | 112 | ಪುಟ್ಟಪ್ಪ ಬಿನ್ ಗುಳ್ಳಪ್ಪ |
| 9 | ಮಾಲೂರು | ಆಲಂಬಾಡಿ | 89/ಪಿ7 | ವೆಂಕಟನಬೋವಿ ಮತ್ತು ಗಾದಿ ರಾಮನಬೋವಿ |
| 10 | ಮಾಲೂರು | ಮಾರಸಂದ್ರ | 10 | ಕುರಿಗಳ ಮುನಿಶಾಮಿ |
| 11 | ಮುಳಬಾಗಿಲು | ಕನ್ನಸಂದ್ರ | 36 | ಜಗ್ಗಾ ಬಿನ್ ಸಂಜೀವಗಾ |
| 12 | ಮುಳಬಾಗಿಲು | ಪುಲಿಓಬರಡ್ಡಿಹಳ್ಳಿ | 37 | ಬಿ ಎಸ್ ಮುನಿವೆಂಕಟಪ್ಪ |
| 13 | ಬಂಗಾರಪೇಟೆ | ರಾಮನಾಯಕನಹಳ್ಳಿ | 71 | ಮುನಿಯಪ್ಪ ಬಿನ್ ಮುಶಾಮಪ್ಪ |
| 14 | ಬಂಗಾರಪೇಟೆ | ರಾಮನಾಯಕನಹಳ್ಳಿ | 71 | ಹನುಮಪ್ಪ ಬಿನ್ ಮುನಿಯಪ್ಪ |
| 15 | ಬಂಗಾರಪೇಟೆ | ರಾಮನಾಯಕನಹಳ್ಳಿ | 71 | ವೆಂಕಟೇಶಪ್ಪ ಬಿನ್ ಮುನೆಪ್ಪ |
| 16 | ಬಂಗಾರಪೇಟೆ | ರಾಮನಾಯಕನಹಳ್ಳಿ | 71 | ಸರದಾರ್ ಬಿನ್ ಪ್ಯಾರುಸಾಬಿ |
| 17 | ಬಂಗಾರಪೇಟೆ | ಸೂಲಿಕುಂಟೆ | 117 | ಟೈಲರ್ ಹೈದರ್ ಸಾಬಿ ಬಿನ್ ಬಾಬಾಸಾಬಿ |
| 18 | ಬಂಗಾರಪೇಟೆ | ಆರಿಮಾನಹಳ್ಳಿ | 38 | ಬೀರಪ್ಪ ಬಿನ್ ಜಡಪ್ಪ |
| 19 | ಕೆ.ಜಿ.ಎಫ್ | ಕಳ್ಳಿಕುಪ್ಪ | 42 | ಚಿಕ್ಕಬುಟ್ಟಪ್ಪ ಬಿನ್ ತೋಟಿ ಮುನಿವೆಂಕಟಪ್ಪ |
| 20 | ಕೆ.ಜಿ.ಎಫ್ | ಕಳ್ಳಿಕುಪ್ಪ | 42 | ವೆಂಕಟಪ್ಪ ಬಿನ್ ಮುನಿವೆಂಕಟಪ್ಪ |
| 21 | ಕೆ.ಜಿ.ಎಫ್ | ಕಳ್ಳಿಕುಪ್ಪ | 42 | ವೆಂಕಟರಾಮಪ್ಪ ಬಿನ್ ಗುಂಡಪ್ಪ |
| 22 | ಕ.ಜಿ.ಎಫ್ | ಕಳ್ಳಿಕುಪ್ಪ | 42 | ವೆಂಕಟೇಶಪ್ಪ ಬಿನ್ ರಾಮಪ್ಪ |
| 23 | ಕೆ.ಜಿ.ಎಫ್ | ಮದ್ದಿನಾಯಕನಹಳ್ಳಿ | 10 | ಗೋವಿಂದಪ್ಪ ಬಿನ್ ಸುಬ್ರಮಣಿ |

ಭೂದಾಖಲೆಗಳ ಉಪನಿರ್ದೇಶಕರು 3/3/26
ಕೋಲಾರ ಜಿಲ್ಲೆ.

Scanned with OKEN Scanner